not to be printed

2nd Cover

# ನೀನಾಸಮ್ ಸಂಸ್ಕೃತಿ ಶಿಬಿರ
# ಅಕ್ಟೋಬರ್ ೨೦೦೬

೧೯೭೯ರಿಂದ ಇಲ್ಲಿಯವರೆಗೆ, ನೀನಾಸಮ್ ಸಂಸ್ಥೆಯು ಸತತವಾಗಿ ಪ್ರತಿ ಅಕ್ಟೋಬರಿನಲ್ಲಿ ಚಲನಚಿತ್ರ ಮತ್ತು ಸಂಸ್ಕೃತಿ ಶಿಬಿರಗಳನ್ನು ನಡೆಸುತ್ತ ಬಂದಿದೆ. ಈ ವರ್ಷದ ಸಂಸ್ಕೃತಿ ಶಿಬಿರವೂ ಅದೇ ಮಾದರಿಯಲ್ಲಿ ಯೋಜಿತವಾಗಿದೆ. ಈ ಶಿಬಿರದಲ್ಲಿ ರಂಗಭೂಮಿ, ಸಾಹಿತ್ಯ, ಸಂಗೀತ, ನೃತ್ಯ, ಚಲನಚಿತ್ರ ಮುಂತಾದ ಸಾಂಸ್ಕೃತಿಕ ಮಾಧ್ಯಮಗಳ ಸ್ವರೂಪ, ವಿಮರ್ಶೆ, ಈ ಮಾಧ್ಯಮಗಳ ಪರಸ್ಪರ ಸಂಬಂಧ ಹಾಗೂ ಒಟ್ಟೂ ಸಮಾಜದೊಂದಿಗೆ ಸಂಸ್ಕೃತಿಯ ಸಂಪರ್ಕ – ಈ ವಿಷಯಗಳ ಬಗ್ಗೆ ಅಭ್ಯಾಸ, ಚರ್ಚೆ, ವಿಚಾರ ವಿನಿಮಯ ನಡೆಯುತ್ತದೆ. ಜತೆಗೆ ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳ ಉತ್ಸವ ನಡೆಯುತ್ತದೆ.

ಅಲ್ಲದೆ, ಪ್ರತಿ ಶಿಬಿರದಲ್ಲಿಯೂ ಒಂದು ನಿರ್ದಿಷ್ಟ ವಿಷಯದ ಬಗ್ಗೆ ಕೇಂದ್ರೀಕರಿಸಿ ಹಲವು ಉಪನ್ಯಾಸ-ಪ್ರಾತ್ಯಕ್ಷಿಕೆ ಮತ್ತು ಚರ್ಚೆಗಳನ್ನು ನಡೆಸಲಾಗುತ್ತದೆ. ಕಳೆದ ವರ್ಷಗಳಲ್ಲಿ ನಡೆದ ಸಂಸ್ಕೃತಿ ಶಿಬಿರಗಳು – ಗ್ರಾಮಭಾರತ, ದೇವದೇವಿಯರು, ಇಪ್ಪತ್ತನೆಯ ಶತಮಾನ, ಸಂಪ್ರದಾಯಗಳು, ಸಾಂಸ್ಕೃತಿಕ ಪರ್ಯಾಯಗಳು, ಸ್ತ್ರೀಲೋಕ – ಇವೇ ಮೊದಲಾದ ಸಾಮಾಜಿಕ-ಸಾಂಸ್ಕೃತಿಕ ವಿಷಯಗಳನ್ನು ಕೇಂದ್ರೀಕರಿಸಿವೆ.

ಪ್ರತಿ ಶಿಬಿರ ಪ್ರಾರಂಭವಾಗುವುದು ಒಟ್ಟೂ ಕಾರ್ಯಕ್ರಮದ ಸ್ಥೂಲ ಸ್ವರೂಪವನ್ನು ಪರಿಚಯಿಸುವ ಅಧಿವೇಶನದಿಂದ. ಆಮೇಲಿನ ದಿನಗಳಲ್ಲಿ ರಂಗಭೂಮಿಯ ಬಗ್ಗೆ, ಸಂಗೀತ-ನೃತ್ಯ ಮಾಧ್ಯಮಗಳ ಬಗ್ಗೆ, ಸಾಹಿತ್ಯಪ್ರಕಾರಗಳ ಬಗ್ಗೆ, ಚಲನಚಿತ್ರ ಸಹೃದಯತೆಯ ಬಗ್ಗೆ ಮತ್ತು ಒಟ್ಟೂ ಸಂಸ್ಕೃತಿ-ಸಂವಹನದ ಪ್ರಕ್ರಿಯೆಯ ಬಗ್ಗೆ ಉಪನ್ಯಾಸ-ಪ್ರಾತ್ಯಕ್ಷಿಕೆ-ಚರ್ಚೆಗಳು ನಡೆಯುತ್ತವೆ. ಆಯಾ ವಿಷಯದ ಬಗ್ಗೆ ಚರ್ಚೆ ನಡೆಯುವಾಗಲೂ ಆಯ್ದ ಕೃತಿಗಳನ್ನು ಪ್ರಾಯೋಗಿಕವಾಗಿ ಬಳಸಿ ಕೊಳ್ಳಲಾಗುತ್ತದೆ. ಶಿಬಿರ ಪ್ರತಿನಿತ್ಯ ಬೆಳಿಗ್ಗೆ ೯ ಗಂಟೆಯಿಂದ ೧ ಗಂಟೆ ಹಾಗೂ ಮಧ್ಯಾಹ್ನ ೨-೩೦ರಿಂದ ೬ ರ ತನಕ ನಡೆಯುತ್ತದೆ.

ಇದಲ್ಲದೆ ಪ್ರತಿದಿನ ಸಂಜೆ ರಂಗಪ್ರದರ್ಶನ, ಸಂಗೀತ, ನೃತ್ಯ, ಹಾಗೂ ಇನ್ನಿತರ ಕಾರ್ಯಕ್ರಮಗಳು ಶಿಬಿರಾರ್ಥಿಗಳು ಮತ್ತು ಸಾರ್ವಜನಿಕರಿಗಾಗಿ ಏರ್ಪಾಟಾಗಿರುತ್ತದೆ.

ಈ ಎಲ್ಲ ಕಾರ್ಯಕ್ರಮಗಳ ಮೂಲಕ ಸಂಸ್ಕೃತಿ ಶಿಬಿರವು ಉದ್ದೇಶಿಸಿಕೊಂಡಿರುವ ಗುರಿ ಎರಡು ಬಗೆಯದಾಗಿದೆ – ೧. ಕರ್ನಾಟಕ ಮತ್ತು ಹೊರಗಿನ ಚಿಂತಕರು ಮತ್ತು ಕಲಾವಿದರು ವರ್ಷಕ್ಕೊಮ್ಮೆ ಒಗ್ಗೂಡಿ ಪರಸ್ಪರ ಚರ್ಚಿಸುವ ವೇದಿಕೆಯೊಂದನ್ನು ರೂಪಿಸುವುದು ಮತ್ತು ೨. ಮತ್ತು, ಜತೆಗೇ, ಕರ್ನಾಟಕದ ಸಾಮಾಜಿಕ-ಸಾಂಸ್ಕೃತಿಕ ವಿದ್ಯಮಾನಗಳಲ್ಲಿ ಆಸಕ್ತರೂ ಕ್ರಿಯಾಶೀಲರೂ ಆಗಿರುವವರ ನಡುವೆ ಒಂದು ಸಂವೇದನಾಶೀಲ ಸಂವಾದವನ್ನು ಏರ್ಪಡಿಸುವುದು.

ನೀನಾಸಮ್, ಹೆಗ್ಗೋಡು, ಸಾಗರ, ಕರ್ನಾಟಕ ೫೭೭ ೪೧೭

not to be printed

3rd Cover

# NINASAM
# CULTURE COURSE 2006

The Culture Course has been one of Ninasam's major annual events for the last two decades. Held over 7 days every October, The Course is designed around a specific theme every year, and organised as a combination of special lectures on the theme, lecture-demonstration-discussions on fundamentals of appreciation of art forms like literature, theatre, film, music, dance, and so on -- all this during the day-sessions, and a series of cultural programmes in the evenings. The evening festival this year consists of the following programmes:

- **1st October, Sunday:** Ninasam Tirugata Performance - ***Birugaali;*** Directed by Abhilash Pillai
- **2nd October, Monday:** Ninasam Tirugata Performance - ***Undaadi Gunda;*** Directed by Iqbal Ahmed
- **3rd October, Tuesday:** Ninasam Performance-***Talakaadugonda;*** Directed by B.R. Venkataramana Aithala
- **4th October, Wednesday:** Ninasam Performance- ***Krama Vikrama;*** Directed by Akshara K.V.
- **5th October, Thursday:** Karnatic Music Vocal Recital by **Vid. T.M.Krishna,** Chennai
- **6th October, Friday:** One-man Performance: ***Mahadevbhai 1898-1942*** by Jaimini Patak, Mumbai
- **7th October, Saturday:** Dance Performance ***Sharira*** directed by **Chandralekha,** Chennai

**Ninasam, Heggodu, Sagara**
**Karnataka 577 417**

not to be
printed
↓
Page 1

# ನೀನಾಸಮ್ ಸಂಸ್ಕೃತಿ ಶಿಬಿರ - ೨೦೦೬
# ಹಗಲಿನ ಕಾರ್ಯಕ್ರಮಗಳು

ಡಾ. ಯು.ಆರ್. ಅನಂತಮೂರ್ತಿ ಅವರು ನಿರ್ದೇಶಕರಾಗಿರುವ ಈ ಬಾರಿಯ ಶಿಬಿರವು 'ವಿಶ್ವಾತ್ಮಕತೆಯ ಹಿನ್ನೆಲೆಗಳು' ಎಂಬ ವಿಷಯವನ್ನು ಕುರಿತು ಸ್ಥೂಲವಾಗಿ ಕೇಂದ್ರೀಕರಿಸುತ್ತದೆ. ಹಿಂಸೆಯೆಂಬುದು ಇವತ್ತಿನ ಆಧುನಿಕ ಜಗತ್ತಿನ ಸರ್ವವ್ಯಾಪಿ ಅನುಭವಗಳಲ್ಲೊಂದು. ಹಿಂಸೆಯು ಇವತ್ತು ಹಲವು ರೂಪಗಳಲ್ಲಿ ಮತ್ತು ಹಲವು ಕ್ಷೇತ್ರಗಳಲ್ಲಿ ತನ್ನ ಕಬಂಧಬಾಹುಗಳನ್ನು ವಿಸ್ತರಿಸಿಕೊಳ್ಳತೊಡಗಿದೆ — ರಾಷ್ಟ್ರದ ಹಿಂಸೆ, ರಾಷ್ಟ್ರವಿರೋಧಿ ಹಿಂಸೆ; ಧರ್ಮದ ಹಿಂಸೆ, ವಿಜ್ಞಾನದ ಹಿಂಸೆ, ಅಭಿವೃದ್ಧಿಯ ಹಿಂಸೆ; ಸಾಮಾಜಿಕ ಅಸಮಾನತೆಯ ಹಿಂಸೆ ಮತ್ತು ಆರ್ಥಿಕ ತಾರತಮ್ಯಗಳ ಹಿಂಸೆ ಇತ್ಯಾದಿ ಇತ್ಯಾದಿ.

ಈ ಎಲ್ಲ ವಿಷಯಗಳಿಗೆ ಸಂಬಂಧಿಸಿದಂತೆ, ಹಲವು ಉಪನ್ಯಾಸ ಮತ್ತು ಚರ್ಚೆಗಳು ಈ ಶಿಬಿರದುದ್ದಕ್ಕೂ ನಡೆಯಲಿವೆ. ಡಾ. ಯು.ಆರ್. ಅನಂತಮೂರ್ತಿ ಅವರಲ್ಲದೆ, ಡಾ. ಶಿವ ವಿಶ್ವನಾಥನ್, ಶ್ರೀ ಸಮೀಕ್ ಬಂದೋಪಾಧ್ಯಾಯ ಮೊದಲಾದವರು ಈ ವಿಚಾರವನ್ನು ಕುರಿತು ಶಿಬಿರದಲ್ಲಿ ಪ್ರಾರಂಭಿಕವಾಗಿ ಮಾತಾಡಲಿದ್ದಾರೆ.

ಇದಕ್ಕೆ ಪೂರಕವಾಗಿ, ಬೇರೆಬೇರೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ವ್ಯಕ್ತವಾಗುತ್ತಿರುವ ಹಿಂಸೆಯ ಸ್ವರೂಪಗಳನ್ನೂ ವಿಭಿನ್ನ ಪ್ರತಿನಿಧೀಕರಣಗಳನ್ನು ಕುರಿತಂತೆ ಕೂಡ ಈ ಶಿಬಿರದಲ್ಲಿ ಸಂವಾದ ಮತ್ತು ಚರ್ಚೆಗಳನ್ನು ಏರ್ಪಡಿಸಲಾಗಿದೆ. ರಂಗಭೂಮಿ, ಚಲನಚಿತ್ರ, ಕನ್ನಡ ಭಾಷೆ-ನಾಡಿನ ಮಾಧ್ಯಮಗಳು, ವಿಜ್ಞಾನ — ಇವೇ ಮೊದಲಾದ ಕ್ಷೇತ್ರಗಳನ್ನು ಕೇಂದ್ರವಾಗಿ ಇಟ್ಟುಕೊಂಡು ನಡೆಯಲಿರುವ ಈ ಚರ್ಚೆಗಳಲ್ಲಿ — ಶ್ರೀ ವಿಜಯ ಪೂಣಚ್ಚ, ಶ್ರೀ ಮನು ಚಕ್ರವರ್ತಿ, ಶ್ರೀಮತಿ ಸುದೇಷ್ಣಾ ಬ್ಯಾನರ್ಜಿ, ಶ್ರೀ ಸದಾನಂದ್, ಶ್ರೀ ಪ್ರಕಾಶ ಬೆಳವಾಡಿ, ಶ್ರೀ ರಘುನಂದನ, ಶ್ರೀ ಕಿ.ರಂ. ನಾಗರಾಜ್, ಡಾ. ಕೆ. ಮರುಳಸಿದ್ದಪ್ಪ, ಶ್ರೀ ಸದಾನಂದ ಮೆನೋನ್, ಶ್ರೀಮತಿ ವೈದೇಹಿ, ಶ್ರೀಮತಿ ಆಶಾದೇವಿ, ಶ್ರೀ ಸುಂದರ ಸಾರುಕ್ಕೈ — ಮೊದಲಾದ ಗಣ್ಯರು ಮಾತಾಡಲಿದ್ದಾರೆ.

ಇದೆಲ್ಲದರ ಜತೆಗೆ, ಪ್ರತಿ ಶಿಬಿರಗಳಲ್ಲೂ ನಡೆಯುವಂತೆಯೇ, ಈ ಬಾರಿಯೂ ಕಲಾಸಹೃದಯತೆಗೆ ಸಂಬಂಧಿಸಿದ ಉಪನ್ಯಾಸ ಪ್ರಾತ್ಯಕ್ಷಿಕೆಗಳು ನಡೆಯಲಿವೆ. ತಿರುಗಾಟ ನಾಟಕಗಳ ಚರ್ಚೆ-ವಿಶ್ಲೇಷಣೆಯೇ ಅಲ್ಲದೆ, ಕಾವ್ಯ, ಸಂಗೀತ, ನೃತ್ಯ ಮತ್ತು ಚಲನಚಿತ್ರಕ್ಕೆ ಸಂಬಂಧಿಸಿದ ರಸಗ್ರಹಣ ಕಾರ್ಯಕ್ರಮಗಳನ್ನು ಈ ಬಾರಿ — ಶ್ರೀ ಭಾಸ್ಕರ ಚಂದಾವರ್ಕರ್, ಡಾ. ಚಂದ್ರಶೇಖರ ಕಂಬಾರ, ಡಾ. ರಾಜಶೇಖರ ಮನ್ಸೂರ್, ಶ್ರೀ ಆನಂದ ಪಟವರ್ಧನ್ ಮೊದಲಾದವರು ನಡೆಸಿಕೊಡಲಿದ್ದಾರೆ.

ಜತೆಗೆ, ಈ ದಿನಗಳಲ್ಲಿ, ಪ್ರತಿ ಸಂಜೆ ನಡೆಯುವ ಸಂಸ್ಕೃತಿ ಉತ್ಸವದ ಕಾರ್ಯಕ್ರಮಗಳ ಪಟ್ಟಿ ಮತ್ತು ಪರಿಚಯ ಮುಂದಿನ ಪುಟಗಳಲ್ಲಿದೆ.

**ಶಿಬಿರ ನಿರ್ದೇಶಕರು: ಡಾ. ಯು.ಆರ್. ಅನಂತಮೂರ್ತಿ**

not to be
printed
↓
Page 2

## ಅಕ್ಟೋಬರ್ ೧ ಭಾನುವಾರ

photo to be printed here
see cd for the photo with this file no.
↓
೮೮೦೧

ತಿರುಗಾಟ ನಾಟಕ

## ಬಿರುಗಾಳಿ

ವಿಲಿಯಂ ಷೇಕ್ಸ್‌ಪಿಯರ್‌ನ 'ದಿ ಟೆಂಪೆಸ್ಟ್' ನಾಟಕ ಆಧಾರಿತ
ಕುವೆಂಪುರವರ ನಾಟಕ
ರಂಗ ಮತ್ತು ವಸ್ತ್ರವಿನ್ಯಾಸ: ಚನ್ನಕೇಶವ
ಸಂಗೀತ ವಿನ್ಯಾಸ: ಚಂದ್ರನ್
**ನಿರ್ದೇಶನ: ಅಭಿಲಾಷ್ ಪಿಳ್ಳೈ**

ಪ್ರಖ್ಯಾತ ಸ್ಪ್ಯಾನಿಷ್ ನಾಟಕಕಾರ ಲೋರ್ಕಾನ 'ದ ಷೂಮೇಕರ್ಸ್ ಪ್ರಾಡಿಜಿಯಸ್ ವೈಫ್' ಎಂಬ ನಾಟಕವನ್ನು ಕನ್ನಡದ ಕವಿ ಬೇಂದ್ರೆಯವರ ೧೯ ಕವನಗಳ ಸಹಯೋಗದಲ್ಲಿಟ್ಟು ಆ ಮೂಲಕ ಹೊಸ ರಂಗಕೃತಿಯೊಂದನ್ನು ನಿರ್ಮಿಸುವ ಇರಾದೆಯಿಂದ ಪ್ರಸ್ತುತ ಪ್ರಯೋಗ ಹೊರಟಿದೆ.

ಲೋರ್ಕಾನ ನಾಟಕವು ಚಮ್ಮಾರನ ಹೆಂಡತಿಯೊಬ್ಬಳನ್ನು ಕೇಂದ್ರವಾಗಿ ಇಟ್ಟುಕೊಂಡು, ಗಂಡು-ಹೆಣ್ಣಿನ ಸಂಬಂಧ ಮತ್ತು ಸಂಘರ್ಷಗಳನ್ನು ಪರಿಶೀಲಿಸುವ ಒಂದು ಕೃತಿ; ಜತೆಗೆ, ವಾಸ್ತವ ಮತ್ತು ಕಲ್ಪನಾಲೋಕಗಳ ವಿಚಿತ್ರವಾದ ಮಿಶ್ರರೂಪಕವೊಂದರ ಮೂಲಕ ಆ ನಾಟಕವು ತನ್ನ ಸಂವಹನೆಯನ್ನು ನಡೆಸುತ್ತದೆ. ಬೇಂದ್ರೆಯವರ ಕಾವ್ಯಲೋಕದಲ್ಲೂ ಕೂಡಾ ಲೋರ್ಕಾನ ಆ ನಾಟಕಕ್ಕೆ ಅಚ್ಚರಿಯಾಗುವಷ್ಟು ರೂಪಸಾಮ್ಯವನ್ನು ಹೊಂದಿರುವ ಒಂದು ವಸ್ತು-ವಿನ್ಯಾಸವನ್ನು ನಾವು ಕಾಣಲಿಕ್ಕೆ ಸಾಧ್ಯವಿದೆ.

ಅಂಥ ಒಂದು ರೂಪಸಾಮ್ಯವನ್ನು ನಡುವಿಗಿಟ್ಟುಕೊಂಡು, ಆ ಮೂಲಕ ಎರಡು ವಿಭಿನ್ನ ಕಾಲ-ದೇಶ-ಸಂಸ್ಕೃತಿಗಳ ನಡುವೆ ಒಂದು ಅಂತರ್‌ಪಠ್ಯೀಯ ಸಂವಾದವನ್ನು ನಡೆಸುತ್ತ, ಇವತ್ತಿನ ಕಾಲದ್ದೇ ಆದೊಂದು ಹೊಸ ರಂಗಾನುಭವವನ್ನು ಸೃಷ್ಟಿಸಲಿಕ್ಕೆ ಈ ಪ್ರಯೋಗವು ಪ್ರಯತ್ನಿಸತೊಡಗಿದೆ.

**ಸಂಜೆ ೭ ಗಂಟೆಗೆ**

not to be
printed
↓
Page 3

**ಅಕ್ಟೋಬರ್ ೨ ಸೋಮವಾರ**

photo to be printed here
see cd for the photo with this file no.
↓
**ಅಅD೨**

*ತಾಲೀಮಿನ ಚಿತ್ರ*

ತಿರುಗಾಟ ನಾಟಕ

## ಉಂಡಾಡಿ ಗುಂಡ

ಶೇಕ್ಸ್‌ಪಿಯರ್ ನಾಟಕದ ಅನುವಾದ
ಕನ್ನಡಕ್ಕೆ: ಕೆ.ವಿ. ತಿರುಮಲೇಶ್
ವಿನ್ಯಾಸ: ಚನ್ನಕೇಶವ, ಸಂಗೀತ: ಶ್ರೀಧರ ಹೆಗ್ಗೋಡು
**ನಿರ್ದೇಶನ: ಇಕ್ಬಾಲ್ ಅಹ್ಮದ್**

ಶೇಕ್‌ಸ್ಪಿಯರ್‌ನ ಪ್ರಸಿದ್ಧ ನಾಟಕವೊಂದರ ಹೊಸ ಕನ್ನಡಾನುವಾದವನ್ನು ಆಧರಿಸಿರುವ ಪ್ರಯೋಗ ಇದು. ವೆರೋನಾ ನಗರದಲ್ಲಿ, ಪ್ರತಿಷ್ಠೆಯಲ್ಲಿ ಸಮಾನವೆನ್ನಿಸಿಕೊಂಡು ಮೆರೆಯುತ್ತಿರುವ ಎರಡು ಪ್ರಸಿದ್ಧ ಕುಟುಂಬಗಳ ನಡುವಿನ ಕಲಹವು ಇಡೀ ಊರಿಗೇ ವ್ಯಾಪಿಸಿ, ಆ ಮೂಲಕ, ಆ ಎರಡು ಕುಟುಂಬಗಳಿಗೆ ಸೇರಿದ ಇಬ್ಬರು ಪ್ರೇಮಿಗಳ ಬದುಕನ್ನು ಕಾಡಿ ದಾರುಣವಾಗಿ ಅಂತ್ಯಗೊಳ್ಳುವ ಕಥೆ ಈ ನಾಟಕದ ಭಿತ್ತಿ. ಈ ಕಥಾಭಿತ್ತಿಯ ಹಿನ್ನೆಲೆಯಲ್ಲಿ, ಸಮಾಜ ಮತ್ತು ಮನುಷ್ಯಸ್ವಭಾವದ ಹಲವು ಮಜಲುಗಳನ್ನು ಪ್ರತಿಬಿಂಬಿಸುವ ಅಸಾಧಾರಣ ಪಾತ್ರವೈವಿಧ್ಯಗಳು ಈ ಕೃತಿಯಲ್ಲಿ ಬರುತ್ತವೆ; ಮತ್ತು, ಆ ಮೂಲಕ ಸಾರ್ವಕಾಲಿಕವಾಗಿದ್ದೂ ತುಂಬ ಸಮಕಾಲೀನವೂ ಆಗುವ ರೂಪಕಜಗತ್ತೊಂದನ್ನು ಅವು ನಮ್ಮೆದುರಿಗೆ ಸೃಷ್ಟಿ ಮಾಡುತ್ತವೆ.

ವಿಶ್ವದ ಗಂಭೀರನಾಟಕಗಳಲ್ಲೇ ಸುಪ್ರಸಿದ್ಧವಾದ ಈ ಕೃತಿಯು ಕನ್ನಡದಲ್ಲಿ ಹಲವು ಅನುವಾದ-ರೂಪಾಂತರಗಳನ್ನು ಕಂಡಿದ್ದರೂ ಪ್ರಯೋಗವಾಗಿದ್ದು ಕಡಿಮೆ. ಆದ್ದರಿಂದ, ಪ್ರಸ್ತುತ ಪ್ರಯೋಗದಲ್ಲಿ, ಇವತ್ತಿನ ಕಾಲ-ದೇಶಗಳ ಸಂದರ್ಭಕ್ಕೆ ಸಲ್ಲುವಂತೆ ಈ ನಾಟಕವನ್ನು ನಮ್ಮ ರಂಗಾಭಿವ್ಯಕ್ತಿಯ ಮೂಲಕವೇ ಪುನರ್‌ಸೃಷ್ಟಿಸಿಕೊಳ್ಳುವ ಪ್ರಯತ್ನ ಮಾಡಲಾಗಿದೆ; ಹಳೆಯ ಕಥೆಯೊಂದನ್ನು ನವೀಕರಿಸಿಕೊಳ್ಳುತ್ತ ನಮ್ಮ ರಂಗಪ್ರಯೋಗದ ಸಾಧ್ಯತೆಗಳನ್ನೂ ವಿಸ್ತರಿಸುವ ಪ್ರಯತ್ನವೊಂದು ಇಲ್ಲಿದೆ.

**ಸಂಜೆ ೭ ಗಂಟೆಗೆ**

not to be
printed
↓
Page 4

**ಅಕ್ಟೋಬರ್ ೩ ಮಂಗಳವಾರ**

photo to be printed here
see cd for the photo with this file no.
↓
**ಅಅD೩**

ಹಿಂದುಸ್ತಾನಿ ಸಂಗೀತ ಗಾಯನ

## ಪಂ। ರಾಜಶೇಖರ ಮನ್ಸೂರ್

ಮತ್ತು ಸಹಕಲಾವಿದರಿಂದ

ಜಯಪುರ-ಅತ್ರೌಲಿ ಘರಾನಾದ ಸಂಗೀತ ಶಾಖೆಯನ್ನು ಕನ್ನಡ ನಾಡಿನಲ್ಲಿ ಮತ್ತು ಹೊರಗೆ ಪ್ರಸಿದ್ಧಗೊಳಿಸಿದ ಮಹತ್ವದ ಕಲಾವಿದರು – ಪಂಡಿತ ಮಲ್ಲಿಕಾರ್ಜುನ ಮನ್ಸೂರ್. ಅವರ ಪುತ್ರರಾದ ಪಂ। ರಾಜಶೇಖರ ಮನ್ಸೂರ್ ಅವರು ತಮ್ಮ ತಂದೆಯವರಿಂದಲೇ ಸಂಗೀತ ಕಲಿತು ಅದೇ ಪರಂಪರೆಯನ್ನು ತಮ್ಮದೇ ಅನನ್ಯ ವಿಶಿಷ್ಟತೆಯೊಂದಿಗೆ ಮುಂದುವರೆಸುತ್ತ ಬಂದಿದ್ದಾರೆ. ಸಂಗೀತ ಸಾಧನೆಯೆಂಬುದು ಪರಂಪರೆ ಮತ್ತು ಸಮಕಾಲೀನತೆಯ ನಡುವಿನ ಸತತ ಅನುಸಂಧಾನ ಎಂದು ನಂಬಿರುವ ರಾಜಶೇಖರ ಮನ್ಸೂರ್ ಅವರು ಅಂಥ ಹುಡುಕಾಟವನ್ನೇ ಕೇಂದ್ರವಾಗಿ ಇಟ್ಟುಕೊಂಡು ತಮ್ಮ ಸಂಗೀತವ್ಯಕ್ತಿತ್ವವನ್ನು ರೂಪಿಸಿಕೊಂಡವರು.

ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಇಂಗ್ಲೀಷ್ ವಿಭಾಗದ ಮುಖ್ಯಸ್ಥರಾಗಿದ್ದು ನಿವೃತ್ತರಾಗಿರುವ ರಾಜಶೇಖರ ಮನ್ಸೂರ್ ಅವರು ಪ್ರಸ್ತುತ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದಾರೆ. ಭಾರತಾದ್ಯಂತ ವಿವಿಧ ಸ್ಥಳಗಳಲ್ಲಿ ಹಾಗೂ ತಾನ್‌ಸೇನ್ ಉತ್ಸವ, ಕಲ್ಕತ್ತಾದ ಸಂಗೀತ ರಿಸರ್ಚ್ ಅಕಾಡೆಮಿ ಮೊದಲಾದೆಡೆ ಅವರ ಕಾರ್ಯಕ್ರಮಗಳು ನಡೆದಿವೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಮಲ್ಲಿಕಾರ್ಜುನ ಮನ್ಸೂರ್ ಪ್ರಶಸ್ತಿಗಳೂ ಸೇರಿದಂತೆ ಹಲವು ಮನ್ನಣೆಗಳು ಅವರಿಗೆ ಸಂದಿವೆ.

ಪ್ರಸ್ತುತ ಕಾರ್ಯಕ್ರಮದಲ್ಲಿ, ಪಂ. ಮನ್ಸೂರ್ ಅವರೊಂದಿಗಿರುವ ಕಲಾವಿದರು – ಶ್ರೀ ಪಂಚಾಕ್ಷರಿ ಹಿರೇಮಠ (ಹಾರ್ಮೋನಿಯಂ), ಶ್ರೀ ಜಡೇಶ ದೇಸಾಯಿ ಕಲ್ಲೂರು (ತಬಲಾ).

**ಸಂಜೆ ೭ ಗಂಟೆಗೆ**

not to be
printed
Page 5

ಅಕ್ಟೋಬರ್ ೪ ಬುಧವಾರ

photo to be printed here
see cd for the photo with this file no.

ಅಅD೪

ನೀನಾಸಮ್ ನಾಟಕ

## ಕ್ರಮ ವಿಕ್ರಮ

ವಿಲಿಯಂ ಷೇಕ್ಸ್ಪಿಯರ್‌ನ 'ಮೆಷರ್ ಫಾರ್ ಮೆಷರ್'

ನಾಟಕಾನುವಾದ

ವಿನ್ಯಾಸ: ಚನ್ನಕೇಶವ

**ಅನುವಾದ ಮತ್ತು ನಿರ್ದೇಶನ: ಅಕ್ಷರ ಕೆ.ವಿ.**

ಕನ್ನಡ ನಾಡಿನ ಇತಿಹಾಸದ ಆಧುನಿಕಪೂರ್ವ ಘಟ್ಟದಲ್ಲಿ ಸಂಭವಿಸಿದ 'ರಾಷ್ಟ್ರನಿರ್ಮಾಣ' ಪ್ರಕ್ರಿಯೆಯ ಒಂದು ಸ್ಥೂಲಚಿತ್ರವನ್ನು ಪ್ರಸ್ತುತ ಕೃತಿ ಮುಂದಿಡುತ್ತದೆ. ಆಗಷ್ಟೇ ಪ್ರವರ್ಧಮಾನಕ್ಕೆ ಬರುತ್ತಿರುವ ಹೊಯ್ಸಳರು ಮತ್ತು ಕಲ್ಯಾಣಿಯ ಚಾಲುಕ್ಯ ದೊರೆ ೬ನೆಯ ವಿಕ್ರಮಾದಿತ್ಯನ ನಡುವಿನ ಮುಸುಕಿನ ಗುದ್ದಾಟದಿಂದ ಆರಂಭಗೊಳ್ಳುವ ಈ ನಾಟಕವು, ಮುಂದೆ, ಹೊಯ್ಸಳ ಮತ್ತು ಚೋಳದೊರೆಗಳ ನಡುವಿನ ಸಂಘರ್ಷದ ಕಡೆಗೆ ತಿರುಗುತ್ತದೆ. ದೋರಸಮುದ್ರ ಹಾಗೂ ತಲಕಾಡಿನ ಸುತ್ತಮುತ್ತಲೇ ನಡೆಯುವ ಈ ನಾಟಕದ ಘಟನಾವಳಿಗಳ ಮೂಲಕ, ಹೊಯ್ಸಳ ಸಾಮ್ರಾಜ್ಯವು ಗಟ್ಟಿಯಾಗಿ ನೆಲೆಗೊಳ್ಳುವ ಪ್ರಕ್ರಿಯೆ ನಮ್ಮ ಮುಂದೆ ಬಿಚ್ಚಿಕೊಳ್ಳುತ್ತದೆ. ಅಂತಿಮವಾಗಿ, ಹಿಂದೆ ತಲಕಾಡನ್ನು ಗೆದ್ದಿದ್ದ ಚೋಳದೊರೆ 'ಗಂಗೈಕೊಂಡ'ನೆನಿಸಿಕೊಂಡಿದ್ದರೆ, ಈಗ ಆ ರಾಜವಂಶವನ್ನು ಸೋಲಿಸುವ ವಿಷ್ಣುವರ್ಧನನು 'ತಲಕಾಡುಗೊಂಡ'ನೆಂಬ ಹೊಸ ಬಿರುದನ್ನು ಧರಿಸಿಕೊಳ್ಳುವುದರೊಂದಿಗೆ ಈ ಕೃತಿ ಮುಕ್ತಾಯಗೊಳ್ಳುತ್ತದೆ.

ಹೆಗ್ಗೋಡು ಮತ್ತು ಸುತ್ತಮುತ್ತಲಿನ ಊರುಗಳ ನೀನಾಸಮ್ ಸಂಸ್ಥೆಯ ಸದಸ್ಯರು, ಕಳೆದ ಹಲವು ವರ್ಷಗಳಲ್ಲಿ ಮಾಡುತ್ತ ಬಂದಿರುವಂತೆಯೇ, ಈ ವರ್ಷವೂ ಕೂಡಿ ಪ್ರಸ್ತುತಪಡಿಸುತ್ತಿರುವ ನಾಟಕ ಪ್ರಯೋಗ ಇದು.

**ಸಂಜೆ ೬ ಗಂಟೆಗೆ**

not to be
printed
Page 6

ಅಕ್ಟೋಬರ್ ೫ ಗುರುವಾರ

photo to be printed here
see cd for the photo with this file no.

ಅಅD೫

ಕರ್ನಾಟಕ ಸಂಗೀತ ಗಾಯನ

## ವಿ| ಟಿ.ಎಂ. ಕೃಷ್ಣ

ಮತ್ತು ಸಹಕಲಾವಿದರಿಂದ

ಮೂವತ್ತು ವರ್ಷ ವಯಸ್ಸಿನ ವಿದ್ವಾನ್ ಟಿ. ಎಂ. ಕೃಷ್ಣ ಅವರು ಇವತ್ತಿನ ಕರ್ನಾಟಕ ಸಂಗೀತ ಕ್ಷೇತ್ರದ ಯುವ ಕಲಾವಿದರ ಶ್ರೇಣಿಯಲ್ಲಿ ಅಗ್ರಪಂಕ್ತಿಯಲ್ಲಿ ಇರುವಂಥವರು. ತಮ್ಮ ೬ನೆಯ ವಯಸ್ಸಿನಿಂದಲೇ ಗುರು ಬಿ. ಸೀತಾರಾಮ ಶರ್ಮ ಅವರಿಂದ ಸಂಗೀತಾಭ್ಯಾಸವನ್ನು ಆರಂಭಿಸಿದ ಅವರು, ಮುಂದೆ ಪ್ರಖ್ಯಾತ ಸಂಗೀತಾಚಾರ್ಯ ಶೆಮ್ಮಂಗುಡಿ ಶ್ರೀನಿವಾಸ ಅಯ್ಯರ್ ಅವರೂ ಸೇರಿದಂತೆ ಹಲವು ಗುರುಗಳಿಂದ ಸಂಗೀತ ಕಲಿತರು.

ಹನ್ನೆರಡನೆಯ ವಯಸ್ಸಿನಲ್ಲಿಯೇ ತಮ್ಮ ಮೊದಲ ಸಂಗೀತ ಕಾರ್ಯಕ್ರಮವನ್ನು ಕೊಟ್ಟಿರುವ ಟಿ.ಎಂ. ಕೃಷ್ಣ ಅವರು ಇದುವರೆಗೆ ಭಾರತದ ಹಲವು ನಗರಗಳಲ್ಲಿ ಕಛೇರಿಗಳನ್ನು ನಡೆಸಿದ್ದಾರೆ; ಅಮೇರಿಕಾ ಮತ್ತು ಆಸ್ಟ್ರೇಲಿಯಾ ಸೇರಿದಂತೆ ಹೊರದೇಶಗಳ ಪ್ರಮುಖ ಸ್ಥಳಗಳಲ್ಲಿಯೂ ತಮ್ಮ ಕಾರ್ಯಕ್ರಮಗಳನ್ನು ಕೊಟ್ಟು ಪ್ರಸಿದ್ಧರಾಗಿದ್ದಾರೆ. ಹಲವು ಪ್ರಶಸ್ತಿಗಳು ಮತ್ತು ಸನ್ಮಾನಗಳು ಅವರಿಗೆ ಸಂದಿವೆ; ಪ್ರಸಿದ್ಧ ಸಂಗೀತ ಉತ್ಸವಗಳಲ್ಲಿ ಅವರ ಗಾಯನಕ್ಕೆ ವಿಶೇಷ ಮನ್ನಣೆಗಳು ದೊರೆತಿವೆ. ಅವರ ಹಲವಾರು ಧ್ವನಿಸುರುಳಿಗಳು ಮತ್ತು ಸಿಡಿಗಳು ಕೂಡಾ ಪ್ರಕಟಗೊಂಡಿವೆ. ಗಾಯನವೇ ಅಲ್ಲದೆ ಸಂಗೀತ ರಸಗ್ರಹಣ, ಶಿಕ್ಷಣ ಮತ್ತು ಸಂಗೀತ ಸಂಯೋಜನೆಯ ಕ್ಷೇತ್ರಗಳಲ್ಲೂ ಇವರು ಗಣನೀಯ ಕೆಲಸ ಮಾಡಿದ್ದಾರೆ.

ಪ್ರಸ್ತುತ ಕಾರ್ಯಕ್ರಮದಲ್ಲಿ ಅವರ ಜತೆಗೂಡುವ ಸಹಕಲಾವಿದರು – ಶ್ರೀಮತಿ ಚಾರುಲತಾ ರಾಮಾನುಜಂ (ಪಿಟೀಲು), ಶ್ರೀ ಅರ್ಜುನ ಕುಮಾರ್ (ಮೃದಂಗ) ಮತ್ತು ಶ್ರೀ ಎನ್. ಅಮೃತ (ಖಂಜೀರಾ).

**ಸಂಜೆ ೬ ಗಂಟೆಗೆ**

not to be printed

Page 7

## ಅಕ್ಟೋಬರ್ ೬ ಶುಕ್ರವಾರ

photo to be printed here
see cd for the photo with this file no.

ಅಅD೬

ಏಕವ್ಯಕ್ತಿ ರಂಗಪ್ರಯೋಗ

# ಮಹದೇವ ಭಾಯಿ ೧೮೯೮–೧೯೪೨

ಶ್ರೀ ಜೈಮಿನಿ ಪಾಠಕ್, ಮುಂಬಯಿ ಅವರಿಂದ

ರಚನೆ ಮತ್ತು ನಿರ್ದೇಶನ: ರಾಮು ರಾಮನಾಥನ್

೧೯೯೯ರಲ್ಲಿ ಮುಂಬಯಿಯಲ್ಲಿ ಆರಂಭಗೊಂಡ 'ವರ್ಕಿಂಗ್ ಟೈಟಲ್' ಎಂಬ ಹೆಸರಿನ ಪ್ರಸ್ತುತ ತಂಡವು ಈ ಪ್ರಯೋಗವನ್ನೇ ಅಲ್ಲದೆ 'ಇ, ಸಕೀನಾ ಮಂಜಿಲ್', 'ದಿ ಅರೇಬಿಯನ್ ನೈಟ್', 'ಕರ್ಫ್ಯೂ' ಮೊದಲಾದ ಹಲವು ನಾಟಕಗಳನ್ನು ತಯಾರಿಸಿ ದೇಶಾದ್ಯಂತ ಪ್ರದರ್ಶನ ನೀಡುತ್ತ ಬಂದಿದೆ.

ಸುಮಾರು ೨ ತಾಸು ಅವಧಿಯ ಈ 'ಮಹದೇವ ಭಾಯಿ' ಪ್ರಯೋಗವು ೨೦ನೆಯ ಶತಮಾನದ ಪ್ರಥಮಾರ್ಧದ ಇತಿಹಾಸವನ್ನು ಕೇಂದ್ರೀಕರಿಸುತ್ತದೆ; ಆ ಕಾಲದ ಯುಗಪುರುಷ ಮಹಾತ್ಮ ಗಾಂಧಿಯವರಿಗೆ ಕಾರ್ಯದರ್ಶಿಯಾಗಿ ದುಡಿದ ಮಹದೇವ ದೇಸಾಯಿ ಅವರ ಬರವಣಿಗೆಗಳ ಮೂಲಕ ಆ ಕಾಲದ ರಾಜಕೀಯ-ಸಾಮಾಜಿಕ ತಲ್ಲಣಗಳನ್ನು ಪುನರ್‌ನಿರ್ಮಿಸುವ ಪ್ರಯೋಗ ನಡೆಸುತ್ತದೆ. ಇಂಗ್ಲಿಷ್ ಭಾಷೆಯ ಈ ಪ್ರಯೋಗದಲ್ಲಿ, ನೇರಕಥನ ಮತ್ತು ಒಬ್ಬನೇ ನಟ ಹಲವು ವ್ಯಕ್ತಿಗಳಾಗಿ ಪಾತ್ರವಹಿಸುತ್ತ ನಡೆಸುವ ನಾಟಕೀಯ ಪ್ರಸ್ತುತಿ – ಇವುಗಳ ಸ್ವಾರಸ್ಯಕರ ಸಹಯೋಗವಿದೆ. ಗುಜರಾತಿನಲ್ಲಿ ನಡೆದ ಹಿಂಸೆಯ ಬಳಿಕ, ಅದಕ್ಕೆ ಪ್ರತಿಕ್ರಿಯೆಯೆಂಬಂತೆ ರೂಪುಗೊಂಡ ಈ ಪ್ರಯೋಗವು 'ಇತಿಹಾಸದ ಮೂಲಕ ವರ್ತಮಾನವನ್ನೇ ಕಥಿಸಿಕೊಳ್ಳುವ' ಆಶಯವನ್ನೂ ಕೂಡಾ ತನ್ನೊಳಗಿಟ್ಟುಕೊಂಡಿದೆ.

ನಟ-ನಿರ್ದೇಶಕರಲ್ಲದೆ, ಈ ತಂಡದಲ್ಲಿರುವ ಇನ್ನಿತರ ಸದಸ್ಯರು – ಕಿನ್ನರಿ ವೋಹ್ರಾ (ಸಂಶೋಧನೆ ಮತ್ತು ಸಂಗೀತ), ನಿಖಿಲ್ ಖಾಡಿಲ್ಕರ್ ಮತ್ತು ವಿನೇಶ್ ಅಯ್ಯರ್ (ರಂಗ) ಮತ್ತು ಸುರುಚಿ ಔಲಾಖ್ (ವ್ಯವಸ್ಥೆ).

**ಸಂಜೆ ೭ ಗಂಟೆಗೆ**

not to be printed

Page 8

## ಅಕ್ಟೋಬರ್ ೭ ಶನಿವಾರ

photo to be printed here
see cd for the photo with this file no.

ಅಅD೭

ವಿಶೇಷ ನೃತ್ಯ ಕಾರ್ಯಕ್ರಮ

# ಶರೀರ

ಶ್ರೀಮತಿ ಚಂದ್ರಲೇಖಾ, ಚೆನ್ನೈ

ಅವರ ನೇತೃತ್ವದ ತಂಡದ ಕಲಾವಿದರಿಂದ

ಸಂಗೀತ: ಪಂ. ಉಮಾಕಾಂತ ಮತ್ತು ರಮಾಕಾಂತ ಗುಂಡೇಚಾ

ಭಾರತದಲ್ಲಿ, ಸಾಂಪ್ರದಾಯಿಕ ನೃತ್ಯಕಲೆಗಳ ನೆಲೆಗಟ್ಟಿನ ಮೇಲೆ ಇವತ್ತಿನ ಅನುಭವಗಳಿಗೆ ಸಂವಾದಿಯಾಗುವ ಹೊಸ ನೃತ್ಯಮಾರ್ಗವೊಂದನ್ನು ಆವಿಷ್ಕರಿಸಿದ ಮೊದಲಿಗರಲ್ಲೊಬ್ಬರು – ಚಂದ್ರಲೇಖಾ. ೮೦ರ ದಶಕದಲ್ಲಿ ಅವರು ಆರಂಭಿಸಿದ ಇಂಥ ಪ್ರಯೋಗವು 'ಆಂಗಿಕ', 'ಲೀಲಾವತಿ', 'ಪ್ರಾಣ', 'ಯಂತ್ರ' ಮೊದಲಾದ ಕೃತಿಗಳ ಮೂಲಕ ಪ್ರದರ್ಶನಗೊಂಡು ಶೀಘ್ರದಲ್ಲೇ ದೇಶಾದ್ಯಂತ ಮತ್ತು ಹೊರನಾಡುಗಳಲ್ಲಿ ವಿಶೇಷವಾಗಿ ಗಮನ ಸೆಳೆಯಿತು; ಜತೆಗೆ ಹಲವುಹತ್ತು ಕಲಾವಿದರಿಗೆ ಮತ್ತು ತಂಡಗಳಿಗೆ ಸ್ಫೂರ್ತಿಯೂ ಆಯಿತು. ಆ ತಂಡದ ಇತ್ತೀಚಿನ ಪ್ರಯೋಗ – 'ಶರೀರ'.

ಈ ಪ್ರಯೋಗದಲ್ಲಿ ಇಬ್ಬರು ಖ್ಯಾತ ನರ್ತಕರು (ಶಾಜಿ ಕೆ. ಜಾನ್ ಮತ್ತು ತಿಶಾನಿ ದೋಷಿ) ಮತ್ತು ಇಬ್ಬರು ಪ್ರಸಿದ್ಧ ಧ್ರುಪದ ಗಾಯಕರು (ಪಂ. ಉಮಾಕಾಂತ ಮತ್ತು ರಮಾಕಾಂತ ಗುಂಡೇಚಾ) ಕ್ರಿಯಾಶೀಲವಾದ ಸಹಯೋಗದಲ್ಲಿ ಹೊಸ ಹುಡುಕಾಟವೊಂದನ್ನು ನಡೆಸಿದ್ದಾರೆ; ಆತ್ಮದ ಆಳದಲ್ಲಿ ಹುದುಗಿರುವ ಸ್ತ್ರೀಶಕ್ತಿಯನ್ನು ದೇಹ-ಧ್ವನಿಗಳನ್ನು ಒಳಗೊಂಡ ಶರೀರರೂಪಕವೊಂದರ ಮೂಲಕ ಗ್ರಹಿಸುವ ಪ್ರಯೋಗ ಮಾಡಿದ್ದಾರೆ.

ಶ್ರೀಮತಿ ಚಂದ್ರಲೇಖಾ ನಿರ್ದೇಶನದ ಪ್ರಸ್ತುತ ಪ್ರಯೋಗದಲ್ಲಿರುವ ಇನ್ನಿತರ ಕಲಾವಿದರು – ಶ್ರೀ ಅಖಿಲೇಶ್ ಗುಂಡೇಚಾ (ಪಖಾವಾಜ್) ಮತ್ತು ಶ್ರೀ ಸದಾನಂದ ಮೆನೊನ್ (ರಂಗ ಮತ್ತು ಬೆಳಕಿನ ವಿನ್ಯಾಸ).

**ಸಂಜೆ ೭ ಗಂಟೆಗೆ**

envelope
↓

ತೆರೆದ ಅಂಚೆ

**ನೀನಾಸಮ್ ಸಂಸ್ಕೃತಿ ಶಿಬಿರ**
ಅಕ್ಟೋಬರ್ ೨೦೦೬

ತಮಗೆ ಸ್ವಾಗತ

ಶ್ರೀಮತಿ/ಶ್ರೀ..................................................
...................................................................
...................................................................
...................................................................
ಅವರಿಗೆ

**NINASAM**
**Heggodu, Sagara, Karnataka**
**577 417**